ಸಾಕ್ಷಿಗೆ ದಿನಾಂಕಃ **03.06.2024** ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆ ಃ ಪ್ರತಿವಾದಿಗಳ ಪರಃ ಶ್ರೀ. ಹೆಚ್ ಆರ್ ಯು ವಕೀಲರಿಂದ ಃ</u>

ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಈಗಾಗಲೇ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಸತ್ಯವಾಗಿದೆಯೆಂದು ಪ್ರಮಾಣೀಕರಿಸುತ್ತೇನೆ. ಪ್ರಮಾಣಪತ್ರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಮುಂದುವರೆದು ನನ್ನ ಪ್ರತಿವಾದ ಪತ್ರಕ್ಕೆ ಪೂರಕವಾಗುವಂತೆ ಕೆಳಕಂಡ ದಾಖಲೆಗಳನ್ನು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ.

| ಕ್ರಮ ಸಂಖ್ಯೆ | ದಾಖಲೆಗಳು | ನಿಶಾನೆಗಳು |
|---|---|---|
| 1 | ಕೆಳಕೊಪ್ಪ ಗ್ರಾಮ, ಶೃಂಗೇರಿ ತಾಲ್ಲೂಕಿನ ಸರ್ವೆ ನಂಃ 150 ಗೆ ಸಂಬಂಧಪಟ್ಟ ಎರಡು ಪುಟದ ಆರ್ ಟಿ ಸಿ | ನಿಡಿ-1 |
| 2 | ಕೆಳಕೊಪ್ಪ ಗ್ರಾಮ, ಶೃಂಗೇರಿ ತಾಲ್ಲೂಕಿನ ಸರ್ವೆ ನಂಃ 150 ಮತ್ತು 288 ಕ್ಕೆ ಸಂಬಂಧಪಟ್ಟ ಎಂ ಆರ್ ರಿಜಿಸ್ಟರ್ | ನಿಡಿ-2 |
| 3 | ಕೆಳಕೊಪ್ಪ ಗ್ರಾಮ, ಶೃಂಗೇರಿ ತಾಲ್ಲೂಕಿನ ಸರ್ವೆ ನಂಃ 150 ಗೆ ಸಂಬಂಧಪಟ್ಟ ಮಂಜೂರಾತಿ ಸ್ಕೆಚ್ | ನಿಡಿ-3 |
| 4 | ದಿನಾಂಕಃ 28.12.2020 ರಂದು ವಲಯ ಅರಣ್ಯಾಧಿಕಾರಿಗಳಿಗೆ ಸಲ್ಲಿಸಿದ ಮನವಿ | ನಿಡಿ-4 |
| 5 | ದಿನಾಂಕಃ 03.11.2020 ರಂದು ಮಾನ್ಯ ಕಾರ್ಯನಿರ್ವಾಹಕಾಧಿಕಾರಿಗಳು, ತಾಲ್ಲೂಕು, ಪಂಚಾಯಿತಿ, ಶೃಂಗೇರಿ ಇವರಿಗೆ ಸಲ್ಲಿಸಿದ ಮನವಿ | ನಿಡಿ-5 |
| 6 | ದಿನಾಂಕಃ 24.11.2020 ರಂದು ತಾಲ್ಲೂಕು ಪಂಚಾಯಿತಿ, ಶೃಂಗೇರಿಯಿಂದ ಎಡಿ ಎಲ್ ಆರ್ ಕಚೇರಿ ಶೃಂಗೇರಿಗೆ ಕಳುಹಿಸಿದ ಪತ್ರ | ನಿಡಿ-6 |

ಆದ್ದರಿಂದ ದಾವೆಯನ್ನು ವಜಾ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

ಪಾಟೀಸವಾಲು ಃ ವಾದಿ ಪರಃ ಶ್ರೀ.ವಿ ಆರ್ ಎನ್ ವಕೀಲರಿಂದ ಃ

ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ದಿನಾಂಕಃ 03.06.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ಶೃಂಗೇರಿ

ಸಾಕ್ಷಿ ಸಹಿಃ